# ರಾಜ್ಯೋತ್ಸವ ಸೆಲೆಬ್ರೇಷನ್!




■ ವಿದ್ಯಾ ವಿ. ಹಾಲಭಾವಿ

ರಾಜ್ಯೋತ್ಸವ ಶುರು ಆಗೋಕೆ ಮುಂಚೆ ನಮ್ಮೂರಲ್ಲಿ ಯಾಪಾಟಿ ಮಳೆ ಸುರೀತಂದ್ರೆ, ರಸ್ತೆಯಲ್ಲೆಲ್ಲ, ಸ್ಸಾರಿ.. ಗುಂಡಿಗಳಲ್ಲೆಲ್ಲ ನೀರು ತುಂಬಿಕೊಂಡು ಥೇಟ್ ಸ್ವಿಮ್ಮಿಂಗ್ ಪೂಲ್ ಆಗಿಬಿಟ್ಟಿತ್ತು. 'ನವೆಂಬರ್ ಒಂದರಂದು ಅಲ್ಲಲ್ಲಿ ಮೋಡ ಕವಿದ ವಾತಾವರಣ, ಹಗುರದಿಂದ ಭಾರೀ ಮಳೆ ಸುರಿಯಬಹುದು' ಎಂದು ಹವಾಮಾನ ಇಲಾಖೆಯವರು ಮುನ್ಸೂಚನೆಯನ್ನು ನೀಡಿದ್ದರಿಂದ ರಾಜ್ಯೋತ್ಸವವನ್ನು ಹೇಗಪ್ಪಾ ಆಚರಿಸೋದು ಅಂತಾ ಯೋಚನೆ ಶುರುವಾಯಿತು.

ನಮ್ಮ ಗಲ್ಲೀಲಿ, ಆರ್ಕೆಸ್ಟ್ರಾದವರ ಡೇಟ್ ಸಿಕ್ಕಾಗ್ಲೇ ಗಣೇಶ ಚೌತಿ ಮಾಡೋ ಹಾಗೆ, ನಮ್ಮ ಮನೆಯವರನ್ನೆಲ್ಲಾ ಕೇಳಿಯೇ ಈ 'ಮಂತ್'ನಲ್ಲಿ ಯಾವತ್ತಾದ್ರೂ ಅನುಕೂಲವಾದ ಒಂದು ದಿನ 'ಸೆಲೆಬ್ರೇಟ್' ಮಾಡ್ಬೇಕು ಅಂತಾ ಪ್ಲಾನ್ ಮಾಡ್ದೆ. ಈ ವಿಚಾರವನ್ನು ನನ್ನ ಮಗ, ಮಗಳು ಹಾಗೂ ಮನೆಯವರ ಮುಂದೆ ಮಂಡಿಸಿದೆ. 'ರಾಜ್ಯೋತ್ಸವ ಯಾವ ಡೇ ಬರುತ್ತೆ ಮಮ್ಮಿ?' ಎಂದು ಫೇಸ್ಬುಕ್ಕಿನಲ್ಲಿ ಮುಳುಗಿದ್ದ ಮಗಳು ಕ್ವಶ್ಚನಿಸಿದಳು. ನಾನು ಕ್ಯಾಲೆಂಡರ್ ಕಡೆ ಕಣ್ಣಾಡಿಸಿ 'ಈ ಸಲ ಸಂಡೇ ಬಂದಿದೆ ಕಣೆ' ಎಂದು ಹೇಳಿದಾಗ, 'ಅಯ್ಯೋ.. ಒಂದು ರಜಾ ವೇಸ್ಟಾಯ್ತು' ಅಂತಾ ಮುಖ ಕಿವಿಚಿದಳು.

ಅಂತೂ ಇಂತೂ ಅದೇ ದಿನ, ರಾಜ್ಯೋತ್ಸವ ಸೆಲೆಬ್ರೇಷನ್ ಮಾಡೋದಕ್ಕೆ ಎಲ್ಲರ ಒಪ್ಪಿಗೆ ಸಿಕ್ತು. ಆದ್ರೆ ಹ್ಯಾಗೆ ಆಚರಿಸಬೇಕೆಂಬುದೇ ದೊಡ್ಡ ಪ್ರಾಬ್ಲಂ ಆಯ್ತು. 'ಅಲ್ವೇ.. ಆ ದಿನ ಕನ್ನಡ ನ್ಯೂಸ್ ಪೇಪರ್ ತರಿಸಿ ಎಲ್ಲರೂ ಕಂಪಲ್ಸರಿ ಓದಿ ಬಿಡೋಣವೇ?' ಎಂದು ಇಂಗ್ಲಿಷ್ ಪೇಪರ್‌ನಲ್ಲಿ ತಲೆ ತೂರಿಸಿದ್ದ ನನ್ನವರು ಸಜೆಸ್ಟ್ ಮಾಡಿದರು. 'ಹೋಗ್ ಡ್ಯಾಡಿ, ನೀವೊಬ್ರೆ ಬೇಕಾದ್ರೆ ಓದಿ ಕೊಳ್ಳಿ, ನಾನು ಕನ್ನಡ ಲೆಟರ್ಸ್‌ಗಳನ್ನೆಲ್ಲಾ ಕೂಡ್ಸಿ, ಕೂಡ್ಸಿ ಒಂದು ಪ್ಯಾರಾ ಓದೋವಷ್ಟರಲ್ಲಿ ಪ್ಲಾಟಿನಂ ಕನ್ನಡ ರಾಜ್ಯೋತ್ಸವನೇ ಬಂದು ಬಿಡುತ್ತೆ' ಅಂತಾ ಕಾನ್ವೆಂಟ್ ಕನ್ನೆ ಅಬ್ಜೆಕ್ಷನ್ ಮಾಡಿದಳು. 'ಬೇಕಾದ್ರೆ ಯಾವುದಾದ್ರೂ ಕನ್ನಡ ಮೂವಿಗೆ ಹೋಗೋಣ'ವೆಂದು ಸಜೆಷನ್ ಕೊಟ್ಟಳು.

'ಅಯ್ಯಯ್ಯೋ ಕನ್ನಡಾ ಪಿಕ್ಚರ್ ಗಾ? ಕನ್ನಡ ಪಿಕ್ಚರನ್ನ ಯಾರು ನೋಡ್ತಾರೆ? ನಾನು ಮಾತ್ರ ಬಿಲ್ ಕುಲ್ ಬರೊಲ್ಲ, ಬೇಕಾದ್ರೆ ಯಾವುದಾದ್ರೂ ಆಕ್ಷನ್ನೂ ಥ್ರಿಲ್ಲೂ ಇರೋ ಇಂಗ್ಲೀಷ್ ಫಿಲಂ ಗೆ ಹೋಗೋಣ' ಅಂತ ವಿಡಿಯೋ ಗೇಮ್ ನಲ್ಲಿ ಬಿಜಿಯಾಗಿದ್ದ ನನ್ನ ಹೈಸ್ಕೂಲ್ ಹೈದ ಕೂಗು ಹಾಕಿದ. ಎಲ್ಲರೂ ಕೂಡಿ ಕನ್ನಡ ಸಿನಿಮಾಕ್ಕೆ ಹೋಗಬೇಕೆಂಬ ಸಲಹೆಯೂ ಕ್ಯಾನ್ಸಲ್ ಆಯ್ತು.

'ಬಿಸಿ ಬಿಸಿ ಮೆಣಸಿನ ಕಾಯಿ ಬಜ್ಜಿ ಮಾಡಿಬಿಡೆ, ಅದನ್ನು ತಿಂದು ರಾಜ್ಯೋತ್ಸವ ಮಾಡಲು ಯಾರಿಂದಲೂ ಅಬ್ಜೆಕ್ಷನ್ ಬರೊಲ್ಲ' ಎಂದು ನನ್ನವರು ಆಸೆಗಣ್ಣಿನಿಂದ ನನ್ನತ್ತ ನೋಡಿದರು. 'ರಾಜ್ಯೋತ್ಸವ ಆಚರಿಸೋಣ ಅಂದ್ರೆ ಬಜ್ಜಿ ಮಾಡ್ಕೊಂಡು ತಿನ್ನಲು ಹೇಳ್ತೀರಲ್ಲಾ, ನಿಮ್ಮ ತಲೇಲಿ ತಿನ್ನೋದು ಬಿಟ್ಟು ಬೇರೆ ಐಡಿಯಾನೆ ಸಿಕ್ಕಲ್ವಾ' ಅಂತಾ ಬಯ್ದು, ನೀರೂರಿಸುತ್ತಿರುವವರ ಬಾಯನ್ನು ಮುಚ್ಚಿಸಿದೆ. 'ಒಂದು ಕೆಲ್ಸ ಮಾಡೋಣ. ಇವತ್ತಿನ ದಿನಾನೇ ನಾವೆಲ್ಲರೂ ಮನೇಲಿ ಶುದ್ಧ ಕನ್ನಡ ಭಾಷೆಯನ್ನು ಮಾತಾಡೋಣ. ಅದು ಕನ್ನಡ ತಾಯಿಯ ಸೇವೆ ಮಾಡಿದ ಹಾಗೆ ಆಗತ್ತೆ' ಎಂದೆ. ಸದ್ಯ ಇದಕ್ಕೆ ಯಾರಿಂದಲೂ ಆಕ್ಷೇಪಣೆ ಬರಲಿಲ್ಲ.

'ಅಕಸ್ಮಾತ್ ನಾವು ಯಾರಾದ್ರೂ ಮಧ್ಯೆ ಬೇರೆ ಭಾಷೆ ಮಾತಾಡಿಬಿಟ್ರೆ?'– ಮಗಳು ಅನುಮಾನದ ಬಾಣ ತೂರಿಸಿದಳು. ಹೌದಲ್ಲಾ.. ಏನು ಮಾಡೋದು.. ಅಂದುಕೊಳ್ಳುತ್ತಾ ಇದ್ದಾಗ ಒಂದು ಪ್ಲಾನ್ ಹೊಳೀತು. 'ಯಾರು ನಡುವೆ ಬೇರೆ ಭಾಷೆ ಬಳಸದೆ ಅಪ್ಪಟ ಕನ್ನಡದಲ್ಲಿ ಮಾತಾಡುತ್ತಾರೋ ಅವರಿಗೇ ಪ್ರೈಜ್' ಎಂದು ಹೇಳ ಹೊರಟವಳು ಸಾವರಿಸಿಕೊಡು ಬಹುಮಾನ ಎಂದು ಅನೌನ್ಸ್ ಮಾಡಿದೆ. 'ಏನು ಪ್ರೈಜ್ ಕೊಡುತ್ತೀಯ ಮಮ್ಮಿ?'ಎಂದು ಮಗರಾಯ ತಕ್ಷಣ ಕೇಳಿದ. 'ನಿಂಗೆ ಮಾತ್ರ ಬಹುಮಾನ ಇಲ್ಲ, ಮಧ್ಯೆ ಇಂಗ್ಲಿಷ್ ವರ್ಡ್‌ನ ಯೂಸ್ ಮಾಡಿಬಿಟ್ಟೆ' ಎಂದು ಮಗಳು ಅಣಕಿಸಿದಳು.

'ನೀನೂ ಸಹ ಮಾತಾಡಿದೆಯಲ್ಲೇ, ಆ ಬಹುಮಾನ ನನಗೇ ಗ್ಯಾರಂಟಿ' ಎಂದು ನನ್ನವರು ಖುಷಿಯಿಂದ ಕೂಗಿದರು. ಆಹಾಹಾ! ನೀವು ಮಾತಾಡಿದ್ದು ಶುದ್ಧ ಕನ್ನಡಾನಾ? ಬಹುಮಾನ ಗ್ಯಾರಂಟೀ ಅಂತಾ ಕಿರುಚಿದ್ರಲ್ಲಾ. ಆಗ್ಲೇ ಅದು ಕ್ಯಾನ್ಸಲ್ ಆಯ್ತು– ಎಂದು ಹೇಳಿ ನಾನೂ ತುಟಿ ಕಚ್ಚಿಕೊಂಡೆ!

'ನಮ್ಮೂರ ರಸ್ತೆಗಳೂ ಕನ್ನಡ ಭಾಷೇನೂ ಒಂದೇ ತರ ಕಣೆ! ಇಂಗ್ಲಿಷ್ ಇರದ ಕನ್ನಡವನ್ನೂ, ಗುಂಡಿಗಳಿರದ ಯಾವ ರಸ್ತೇನೂ ಬೆಂಗ್ಳೂರಲ್ಲಿ ನೋಡಕ್ಕೆ ಸಾಧ್ಯವೇ ಇಲ್ಲ' ಅಂತ ನಮ್ಮವರು ಕನ್ನಡ ಭಾಷೆಯನ್ನು ರಸ್ತೆಗಳಿಗೆ ಹೋಲಿಸಿದಾಗ 'ಹೌದಲ್ಲವೇ..' ಎಂದು ಯೋಚಿಸುತ್ತಾ ಕುಕ್ಕರ್ ಇಡಲು ಅಡುಗೆ ಮನೆ ಕಡೆ ನಡೆದೆ.